# ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ

(ಕಛೇರಿ): 08354–230278/230280
(ಫ್ಯಾಕ್ಸ್): 08354–230300
**e-mail:** registrar@uhsbagalkot.edu.in

**ಕುಲಸಚಿವರು,**
ಉದ್ಯಾನಗಿರಿ, ನವನಗರ,
ಬಾಗಲಕೋಟ – 587104
ರಾಜ್ಯ : ಕರ್ನಾಟಕ

ಸಂಖ್ಯೆ: ಕುಸ:ಶೈಕ್ಷಣಿಕ/ಡಿಪ್ಲೋಮಾ–8/ /2020–21 ದಿನಾಂಕ: 01.09.2020

## ಅಧಿಸೂಚನೆ

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟದಲ್ಲಿ 2020–21 ನೇ ಸಾಲಿನ **ಡಿಪ್ಲೋಮಾ (ತೋಟಗಾರಿಕೆ) ಎರಡು ವರ್ಷದ ಕೋರ್ಸ್** ಪ್ರವೇಶಕ್ಕಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ.

**1. ಕೋರ್ಸಿನ ವಿವರ**

| **ಕೋರ್ಸ್ ಹೆಸರು** | **ಅವಧಿ** | **ಕೇಂದ್ರವಾರು ಸೀಟುಗಳ ಸಂಖ್ಯೆ** | | **ಶೈಕ್ಷಣಿಕ ಅರ್ಹತೆ** |
|---|---|---|---|---|
| | | **ಕಿ.ರಾ.ಚ. ತೋ.ಮ.ವಿ., ಅರಭಾವಿ** | **ತೋ.ಮ.ವಿ., ಕೋಲಾರ (ಹೊಗಳಗೇರೆ)** | |
| **ಡಿಪ್ಲೋಮಾ (ತೋಟಗಾರಿಕೆ)** | 2 ವರ್ಷ | 30 | 30 | ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಎಸ್ ಎಸ್ ಎಲ್ ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು |

- ಅರ್ಜಿ ನಮೂನೆ, ಬ್ಯಾಂಕ ಚಲನ್ ಪ್ರತಿ, ವಿವರಣಾ ಹಾಗೂ ಮಾಹಿತಿ ಪುಸ್ತಕ, ಅರ್ಜಿ ಭರ್ತಿ ಮಾಡುವ ವಿಧಾನ ಮತ್ತು ಕೇಂದ್ರಗಳವಾರು ಸೀಟುಗಳ ವಿವರಗಳನ್ನು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ ವೆಬ್‌ಸೈಟ್: www.uhsbagalkot.edu.in ನಲ್ಲಿ ಮಾತ್ರ ಪಡೆಯಬಹುದು. ವಿವರಣಾ ಹಾಗೂ ಮಾಹಿತಿ ಪುಸ್ತಕದಲ್ಲಿ ಆಯ್ಕೆ ಪ್ರಕ್ರಿಯೆಯ ವಿವರಗಳನ್ನು ಹಾಗೂ ಪ್ರವೇಶ ಶುಲ್ಕದ ವಿವರಗಳನ್ನು ನೀಡಲಾಗಿರುತ್ತದೆ.
- **ಅರ್ಜಿ ಸಲ್ಲಿಸುವ ಅಭ್ಯರ್ಥಿಗಳ ವಯಸ್ಸು ದಿನಾಂಕ:30.09.2020 ರಂದು 25 ವರ್ಷಗಳನ್ನು ಮೀರಿರಬಾರದು.**

**2. ಪ್ರವೇಶ ಮೀಸಲಾತಿ :** ವಿವಿಧ ಮೀಸಲಾತಿ ವರ್ಗಗಳಿಗೆ ಕರ್ನಾಟಕ ಸರ್ಕಾರದ ಪ್ರಚಲಿತ ಮೀಸಲಾತಿ ಆದೇಶಗಳನ್ನು ಅನುಸರಿಸಲಾಗುವುದು.

**3. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 30.09.2020**

**4. ಅರ್ಜಿಯೊಂದಿಗೆ ಸಲ್ಲಿಸಬೇಕಾದ ಶುಲ್ಕ :**

ಅರ್ಜಿ ನಮೂನೆ ಮತ್ತು ಬ್ಯಾಂಕ ಚಲನ್‌ಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಪಡೆದುಕೊಳ್ಳುವುದು. ಅನ್ವಯವಾಗುವಂತೆ ಅರ್ಜಿ ಶುಲ್ಕವನ್ನು **ಸ್ಟೇಟ್ ಬ್ಯಾಂಕ ಆಫ್ ಇಂಡಿಯಾದ** ಯಾವುದೇ ಶಾಖೆಯಲ್ಲಿ ಪಾವತಿಸುವುದು. ಈ ರೀತಿ ಶುಲ್ಕ ಪಾವತಿಸಿದ ರಶೀದಿಯನ್ನು (ವಿಶ್ವವಿದ್ಯಾಲಯದ ಚಲನ್ ಪ್ರತಿ) ಅರ್ಜಿ ಜೊತೆಗೆ ಕಡ್ಡಾಯವಾಗಿ ಲಗತ್ತಿಸುವುದು. ಲಗತ್ತಿಸದಿದ್ದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು.

**ಶುಲ್ಕದ ವಿವರ**

1) ಸಾಮಾನ್ಯ ಅಭ್ಯರ್ಥಿಗಳಿಗೆ – 500=00 (+60 ಬ್ಯಾಂಕಿನ ವೆಚ್ಚ ಪ್ರತ್ಯೇಕ)
2) ಪ.ಜಾ/ಪ.ಪಂ/ಪ್ರವರ್ಗ–1 ಅಭ್ಯರ್ಥಿಗಳಿಗೆ – 250=00 (+60 ಬ್ಯಾಂಕಿನ ವೆಚ್ಚ ಪ್ರತ್ಯೇಕ)

* **ಡಿ.ಡಿ/ಐಪಿಒ/ಚೆಕ್‌ಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.**

**6. ಬೋಧನಾ ಕ್ರಮ ಮತ್ತು ಮಾಧ್ಯಮ :** ಡಿಪ್ಲೋಮಾ (ತೋಟಗಾರಿಕೆ) ಎರಡು ವರ್ಷದ ಕೋರ್ಸ್‌ನ್ನು ಕನ್ನಡ ಮಾಧ್ಯಮದಲ್ಲಿ ಸೆಮಿಸ್ಟರ್ ಪದ್ದತಿಯಲ್ಲಿ ಬೋಧಿಸಲಾಗುವುದು.

ಡಿಪ್ಲೋಮಾ (ತೋಟಗಾರಿಕೆ) ಎರಡು ವರ್ಷದ ಕೋರ್ಸ್‌ಗೆ ಪ್ರವೇಶ ಬಯಸುವ ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಗಳನ್ನು, ವಿಶ್ವವಿದ್ಯಾಲಯದ ಚಲನ್ ಪ್ರತಿ ಮತ್ತು ಎಲ್ಲಾ ಅವಶ್ಯಕ ದಾಖಲೆಗಳೊಂದಿಗೆ **ಡೀನ್(ಸ್ನಾತಕೋತ್ತರ), ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಉದ್ಯಾನಗಿರಿ, ನವನಗರ, ಬಾಗಲಕೋಟ–587104** ಇವರಿಗೆ ದಿನಾಂಕ: **30.09.2020** ರ ಸಂಜೆ **5.00** ಘಂಟೆಯ ಒಳಗಾಗಿ ತಲುಪುವಂತೆ ಸಲ್ಲಿಸುವುದು. ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

**7. ಪ್ರವೇಶ ವಿಧಾನ :**

ಡಿಪ್ಲೋಮಾ (ತೋಟಗಾರಿಕೆ) ಕೋರ್ಸಿಗೆ ಎಸ್.ಎಸ್.ಎಲ್.ಸಿ./ತತ್ಸಮಾನ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಮೆರಿಟ್ ಹಾಗೂ ರೋಸ್ಟರ್ ಪದ್ಧತಿ ಆಧರಿಸಿ ಅಭ್ಯರ್ಥಿ ಆಯ್ಕೆ ಮಾಡಿರುವ ಮಹಾವಿದ್ಯಾಲಯದ ಆದ್ಯತೆಯನ್ನು ಪರಿಗಣಿಸಿ ಸೀಟು ಹಂಚಿಕೆ ಮಾಡಲಾಗುವುದು.

ಪುರಸ್ಕೃತ ಹಾಗೂ ತಿರಸ್ಕೃತಗೊಂಡ ಅಭ್ಯರ್ಥಿಗಳ ಪಟ್ಟಿಯನ್ನು ನಿಗದಿತ ದಿನಾಂಕದಂದು ವೆಬ್‌ಸೈಟ್ www.uhsbagalkot.edu.in ದಲ್ಲಿ ಪ್ರಕಟಿಸಲಾಗುವುದು. **ನಂತರ ಮೊದಲನೇಯ ಮತ್ತು ಎರಡನೇಯ ಪಟ್ಟಿಯಲ್ಲಿ** ಆಯ್ಕೆಯಾದ ಅರ್ಹ ಅಭ್ಯರ್ಥಿಗಳ ಹೆಸರುಗಳನ್ನು ವಿಶ್ವವಿದ್ಯಾಲಯದ **ವೆಬ್‌ಸೈಟ್** www.uhsbagalkot.edu.in **ದಲ್ಲಿ ನಿಗದಿತ ದಿನಾಂಕಗಳಂದು ಪ್ರಕಟಿಸಲಾಗುವುದು. ಆಯ್ಕೆಯಾದ ಅಭ್ಯರ್ಥಿಗಳು ನಿಗದಿತ ದಿನಾಂಕದೊಳಗಾಗಿ ಆಯ್ಕೆಯಾದ ಮಹಾವಿದ್ಯಾಲಯಗಳಲ್ಲಿ ಮೂಲದಾಖಲಾತಿಗಳನ್ನು ಪರಿಶೀಲನೆ ಮಾಡಿಸುವ ಸಮಯದಲ್ಲಿ ನಿಗದಿತ ಶುಲ್ಕವನ್ನು ಪಾವತಿ ಮಾಡಿ ಪ್ರವೇಶ ಪಡೆಯತಕ್ಕದ್ದು. ಒಂದು ವೇಳೆ ಆ ಸಮಯದಲ್ಲಿ ಮೂಲದಾಖಲಾತಿಗಳ ಪರಿಶೀಲನೆ ಹಾಗೂ ನಿಗದಿತ ಶುಲ್ಕ ತುಂಬದಿದ್ದಲ್ಲಿ ಅವರ ಪ್ರವೇಶನ್ನು ರದ್ದುಪಡಿಸಲಾಗುವುದು ಹಾಗೂ ನಂತರದ ಅರ್ಹ ಅಭ್ಯರ್ಥಿಗಳಿಗೆ ಸದರಿ ಸೀಟನ್ನು ಹಂಚಿಕೆ ಮಾಡಲಾಗುವುದು.**

8 **ಕಾರ್ಯಕ್ರಮ ಪಟ್ಟಿಯಲ್ಲಿ ಯಾವುದೇ ಬದಲಾವಣೆಯಾಗಿದ್ದಲ್ಲಿ ವಿಶ್ವವಿದ್ಯಾಲಯದ ವೆಬ್‌ಸೈಟ್** www.uhsbagalkot.edu.in **ದಲ್ಲಿ ಪ್ರಕಟಿಸಲಾಗುವುದು. ಕಾರಣ ಅಭ್ಯರ್ಥಿಗಳು ನಿರಂತರ ವೆಬ್‌ಸೈಟ್ ಗಮನಿಸುವುದು**

**9. ತರಗತಿಗಳು ದಿ:02.11.2020 ರಿಂದ (ಕರ್ನಾಟಕ ಸರ್ಕಾರದ ಆದೇಶಕ್ಕೆ ಒಳಪಟ್ಟು) ಪ್ರಾರಂಭಗೊಳ್ಳುತ್ತವೆ.**

10. ಇತರ ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾಲಯದ ವೆಬ್‌ಸೈಟ್: www.uhsbagalkot.edu.in ನೋಡುವುದು.

11. ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟವು ಯಾವುದೇ ಉದ್ಯೋಗ ಭರವಸೆಯ ಆಧಾರದ ಮೇಲೆ ಮೇಲ್ಕಂಡ ಕೋರ್ಸನ್ನು ನಡೆಸುವುದಿಲ್ಲ.

**ಆದೇಶದ ಮೇರೆಗೆ**

**ಕುಲಸಚಿವರು**
**ತೋ.ವಿ.ವಿ. ಬಾಗಲಕೋಟ**

ಗೆ: **ಸೂಚನಾ ಫಲಕ.**

ವಿಶ್ವವಿದ್ಯಾಲಯದ ಎಲ್ಲ ಡೀನ್‌ಗಳು, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ.

**ಪ್ರತಿಯನ್ನು ಆದರಪೂರ್ವಕವಾಗಿ:**

1. ಸಂಶೋಧನಾ ನಿರ್ದೇಶಕರು / ವಿಸ್ತರಣಾ ನಿರ್ದೇಶಕರು / ಡೀನ್ (ಸ್ನಾತಕೋತ್ತರ) / ಡೀನ್ ವಿದ್ಯಾರ್ಥಿ ಕಲ್ಯಾಣ / ಗ್ರಂಥಪಾಲಕರು / ಹಣಕಾಸು ನಿಯಂತ್ರಣಾಧಿಕಾರಿಗಳು/ ಆಸ್ತಿ ಅಧಿಕಾರಿಗಳು, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ.
2. ಕುಲಸಚಿವರು, ಕೃಷಿ ವಿಶ್ವವಿದ್ಯಾಲಯ, ಧಾರವಾಡ/ಕೃವಿವಿ, ಬೆಂಗಳೂರು/ಕೃವಿವಿ, ರಾಯಚೂರು/ಕರ್ನಾಟಕ ಪಶು ವೈದ್ಯಕೀಯ ವಿಶ್ವವಿದ್ಯಾಲಯ, ಬೀದರ/ಕೃಷಿ & ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ.
3. ಕಾರ್ಯದರ್ಶಿಗಳು, ತೋಟಗಾರಿಕೆ/ಕೃಷಿ ಇಲಾಖೆ, ಬೆಂಗಳೂರು
4. ನಿರ್ದೇಶಕರು, ತೋಟಗಾರಿಕೆ ಇಲಾಖೆ, ಬೆಂಗಳೂರು
5. ಆಯುಕ್ತರು, ತೋಟಗಾರಿಕೆ/ಕೃಷಿ ಇಲಾಖೆ, ಬೆಂಗಳೂರು
6. ಮಾನ್ಯ ಮುಖ್ಯಮಂತ್ರಿಗಳ ಆಪ್ತಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು
7. ಮಾನ್ಯ ತೋಟಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
8. ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
9. ಜಿಲ್ಲಾ ವಾರ್ತಾ ಮತ್ತು ಪ್ರಚಾರ ಅಧಿಕಾರಿಗಳು, ವಾರ್ತಾ ಮತ್ತು ಪ್ರಚಾರ ಇಲಾಖೆ, ಜಿಲ್ಲಾ ಆಡಳಿತ ಭವನ, ಬಾಗಲಕೋಟ
10. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು ತೋ.ವಿ.ವಿ., ಬಾಗಲಕೋಟ

**ಪ್ರತಿಯನ್ನು ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಲಾಗಿದೆ :**

1. ಮಾನ್ಯ ಸದಸ್ಯರುಗಳು, ವ್ಯವಸ್ಥಾಪನಾ ಮಂಡಳಿ/ಶೈಕ್ಷಣಿಕ ಪರಿಷತ್ತು, ತೋ.ವಿ.ವಿ., ಬಾಗಲಕೋಟ
2. ಶಿಕ್ಷಣ ನಿರ್ದೇಶಕರು, ತೋ.ವಿ.ವಿ., ಬಾಗಲಕೋಟ